**C.C.123/2023**
**PW-1**

ದಿಃ **28.03.2024** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀಸವಾಲುಃ ಆರೋಪಿ ಪರ ಎ.ಸಿ.ಆರ್. ವಕೀಲರಿಂದ**

ಆರೋಪಿ ಹಾಗೂ ನಿಮ್ಮ ನಡುವೆ ಮುಂಚೆ ಯಾವಾಗ ವ್ಯವಹಾರ ನಡೆದಿತ್ತು ಎಂದರೆ ಸಾಕ್ಷಿ **2018** ರಿಂದ ಎಂದು ಹೇಳುತ್ತಾರೆ. **2018** ರಲ್ಲಿ ನಿಮ್ಮ ಹಾಗೂ ಆರೋಪಿ ನಡುವೆ ಎಷ್ಟು ಹಣದ ವ್ಯವಹಾರ ನಡೆದಿತ್ತು ಎಂದರೆ ಸಾಕ್ಷಿ **5-10** ಸಾವಿರ ಎಂದು ಹೇಳುತ್ತಾರೆ. ದಿಃ **10.06.2022** ರಂದು ಆರೋಪಿ ನಿಮ್ಮಿಂದ ಹಣ ಪಡೆದಾಗ ಭದ್ರತೆಗೆ ಏನು ದಾಖಲಾತಿ ಪಡೆದಿದ್ದೀರಾ ಎಂದರೆ ಸಾಕ್ಷಿ ಚೆಕ್ ಎಂದು ಹೇಳುತ್ತಾರೆ. ಆರೋಪಿ ಹಾಗೂ ನಿಮ್ಮ ನಡುವೆ ಸಾಲ ತೆಗೆದುಕೊಂಡ ದಿನದಂದು ಬಡ್ಡಿಯ ಸಂಬಂಧ ಮಾತುಕತೆಯಾಯಿತಾ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ. ಆರೋಪಿಗೆ ಸಾಲ ಕೊಟ್ಟೆ ಎಂದು ಹೇಳಿದ ಹಣವನ್ನು ನಿಮ್ಮ ಖಾತೆಯಿಂದ ತೆಗೆದು ಕೊಟ್ಟಿರಾ ಎಂದರೆ ಸಾಕ್ಷಿ ಇಲ್ಲ, ನನ್ನ ಬಳಿ ನಗದು ಇತ್ತು ಎಂದು ಹೇಳುತ್ತಾರೆ. ನೀವು ನಿಮ್ಮ ಖಾತೆಯಿಂದ **6** ತಿಂಗಳ ಹಿಂದೆ ಹಣ ತೆಗೆದ ಬಗ್ಗೆ ದಾಖಲಾತಿಯನ್ನು ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲಿಯವರೆಗೂ ಕೊಟ್ಟಿಲ್ಲ, ಬೇಕೆಂದರೆ ಕೊಡುತ್ತೇನೆ ಎಂದು ಹೇಳುತ್ತಾರೆ.

ದಿಃ **19.06.2020** ರಂದು ಆರೋಪಿ ಗೂಗಲ್ ಪೆ ಯಿಂದ ನಿಮ್ಮ ಖಾತೆಗೆ **2** ಸಾವಿರ ಹಣ ವರ್ಗಾವಣೆಯಾಗಿದೆ ಎಂದರೆ ಸರಿ. ದಿಃ **02.12.2020** ರಂದು ಆರೋಪಿ ಗೂಗಲ್ ಪೆ ಯಿಂದ ನಿಮ್ಮ ಖಾತೆಗೆ **3** ಸಾವಿರ ಹಣ ವರ್ಗಾವಣೆಯಾಗಿದೆ ಎಂದರೆ ಸರಿ. ದಿಃ **16.07.2020** ರಂದು ಆರೋಪಿ ಗೂಗಲ್ ಪೆ ಯಿಂದ ನಿಮ್ಮ ಖಾತೆಗೆ **42** ಸಾವಿರ ಹಣ ವರ್ಗಾವಣೆಯಾಗಿದೆ ಎಂದರೆ ಸರಿ. ದಿಃ **20.08.2020** ರಂದು ಆರೋಪಿ ಗೂಗಲ್ ಪೆ ಯಿಂದ ನಿಮ್ಮ ಖಾತೆಗೆ **2** ಸಾವಿರ ಹಣ ವರ್ಗಾವಣೆಯಾಗಿದೆ ಎಂದರೆ ಸರಿ. ದಿಃ **24.12.2020** ರಂದು ಆರೋಪಿ ಗೂಗಲ್ ಪೆ ಯಿಂದ ನಿಮ್ಮ ಖಾತೆಗೆ **5** ಸಾವಿರ ಹಣ ವರ್ಗಾವಣೆಯಾಗಿದೆ ಎಂದರೆ ಸರಿ. ದಿಃ **26.11.2020** ರಂದು ಆರೋಪಿ ಗೂಗಲ್ ಪೆ ಯಿಂದ ನಿಮ್ಮ ಖಾತೆಗೆ **6** ಸಾವಿರ ಹಣ ವರ್ಗಾವಣೆಯಾಗಿದೆ ಎಂದರೆ ಸರಿ. ದಿಃ **11.02.2021** ರಂದು ಆರೋಪಿ ಗೂಗಲ್ ಪೆ ಯಿಂದ ನಿಮ್ಮ ಖಾತೆಗೆ **5** ಸಾವಿರ ಹಣ ವರ್ಗಾವಣೆಯಾಗಿದೆ ಎಂದರೆ ಸರಿ. ದಿಃ **26.02.2021** ರಂದು ಆರೋಪಿ ಗೂಗಲ್ ಪೆ ಯಿಂದ ನಿಮ್ಮ ಖಾತೆಗೆ **4** ಸಾವಿರ ಹಣ ವರ್ಗಾವಣೆಯಾಗಿದೆ ಎಂದರೆ ಸರಿ. ಒಟ್ಟು **69** ಸಾವಿರ ಆರೋಪಿಯ ಖಾತೆಯಿಂದ ನಿಮ್ಮ ಖಾತೆಗೆ

ವರ್ಗಾವಣೆಯಾಗಿದೆ ಎಂದರೆ ಸರಿ. ಸದರಿ ಮೊತ್ತ 2019 ರಲ್ಲಿ ಆರೋಪಿ ನಿಮ್ಮಿಂದ ಪಡೆದ 50 ಸಾವಿರ ರೂ. ಗಳಿಗೆ ಬಡ್ಡಿ ಸಮೇತ ಪಾವತಿ ಮಾಡಿದ ಮೊತ್ತ ಎಂದರೆ ಸರಿಯಲ್ಲ. 2019 ರಲ್ಲಿ ಆರೋಪಿ ನಿಮ್ಮಿಂದ ಪಡೆದ 50 ಸಾವಿರ ರೂ. ಗಳಿಗೆ ಭದ್ರತೆಯಾಗಿ ಆರೋಪಿಯಿಂದ 2 ಚೆಕ್ ಗಳನ್ನು ಪಡೆದಿರುತ್ತೀರಿ ಎಂದರೆ ಸರಿಯಲ್ಲ. ನಿಪಿ-1, 2019 ರಲ್ಲಿ ಆರೋಪಿಯಿಂದ ಪಡೆದ ಎರಡು ಚೆಕ್ ಗಳ ಪೈಕಿ ಒಂದು ಎಂದರೆ ಸರಿಯಲ್ಲ. ಮತ್ತೊಂದು ಚೆಕ್ ಯುನಿಯನ್ ಬ್ಯಾಂಕ್ ಆಫ್ ಇಂಡಿಯಾ, ಹುಣಸೂರು ಶಾಖೆಗೆ ಸೇರಿದ್ದು ಎಂದರೆ ಸಾಕ್ಷಿ ನನ್ನ ಬಳಿ ಯಾವುದು ಇಲ್ಲ ಎಂದು ಹೇಳುತ್ತಾರೆ. ಸದರಿ ಚೆಕ್ ನಂ.053627 ಆಗಿರುತ್ತದೆಂದರೆ ಸಾಕ್ಷಿ ನನ್ನ ಬಳಿಯೇ ಇಲ್ಲ ಎಂದು ಹೇಳುತ್ತಾರೆ.

ದಿಃ 10.06.2022 ರಂದು ನಿಮ್ಮ ಹಾಗೂ ಆರೋಪಿಯ ನಡುವೆ 4 ಲಕ್ಷ ಹಣದ ವ್ಯವಹಾರ ಯಾವುದು ಆಗಿಲ್ಲ ಎಂದರೆ ಸರಿಯಲ್ಲ. ನೀವು 2019 ರಲ್ಲಿ 50 ಸಾವಿರ ಸಾಲಕ್ಕೆ ಭದ್ರತೆಗೆ ಪಡೆದ ಚೆಕ್ ಗಳನ್ನು ಉಪಯೋಗಿಸಿ, ಸುಳ್ಳು ದೂರನ್ನು ದಾಖಲಿಸಿರುತ್ತೀರಾ ಎಂದರೆ ಸರಿಯಲ್ಲ. ಆರೋಪಿ ನಿಮ್ಮ ದೂರಿನಲ್ಲಿ ಹೇಳಿದಂತೆ ಯಾವುದೇ ಕಟ್ಟಡವನ್ನು ಕಟ್ಟಿಲ್ಲ ಹಾಗೂ ನಿವೇಶನ ಹೊಂದಿಲ್ಲ ಎಂದರೆ ಸಾಕ್ಷಿ ನನ್ನ ಬಳಿ ಹಾಗೆ ಹೇಳಿಯೇ ಪಡೆದಿದ್ದು ಎಂದು ಹೇಳುತ್ತಾರೆ. ಆರೋಪಿಯಿಂದ ಅಧಿಕ ಹಣವನ್ನು ವಸೂಲಿ ಮಾಡಲು ಸುಳ್ಳು ದೂರು ದಾಖಲಿಸಿರುತ್ತೀರಿ ಎಂದರೆ ಸರಿಯಲ್ಲ. ನೀವು ಖಾಲಿ ಚಾಪಾ ಕಾಗದಕ್ಕೆ ಆರೋಪಿಯ ಸಹಿ ಪಡೆದು ನಿಮ್ಮ ಬಳಿ ಇಟ್ಟುಕೊಂಡಿರುತ್ತೀರಿ ಎಂದರೆ ಸರಿಯಲ್ಲ. ನಿಮಗೆ ಯಾವುದೇ ಆದಾಯ ಇಲ್ಲದೇ ಇದ್ದರೂ, ಆರೋಪಿಗೆ ಸಾಲ ಕೊಟ್ಟಿದ್ದೇನೆಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸರಿ ಇದೆ.

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ,
ಹುಣಸೂರು